ಕೇಂದ್ರ ಸರ್ಕಾರ ಧ್ವಜ ಸಂಹಿತೆಗೆ ತಿದ್ದುಪಡಿ ತಂದು ಪಾಲಿಸ್ಟರ್ ತ್ರಿವರ್ಣ ಧ್ವಜಗಳ ಮಾರಾಟಕ್ಕೆ ಅನುಮತಿ ನೀಡಿದ್ದರಿಂದ ಖಾದಿ ಧ್ವಜಗಳ ಬೇಡಿಕೆ, ಮಾರಾಟ ಗಣನೀಯ ಪ್ರಮಾಣದಲ್ಲಿ ಕುಸಿತ ಕಂಡಿದೆ.
• **ಸಂತೋಷ ನರಗುಂದ**
ಖಾದಿ ರಾಷ್ಟ್ರಧ್ವಜ ಅಭಿಯಾನದ ಸಂಯೋಜಕ

ಸುದ್ದಿ ಸಿಂಚನ

ಮುತ್ತಣ್ಣವರ ಕಾಂಗ್ರೆಸ್ ವಕ್ತಾರ

ಹುಬ್ಬಳ್ಳಿ: ಧಾರವಾಡ ಜಿಲ್ಲಾ ಕಾಂಗ್ರೆಸ್ ವಕ್ತಾರರನ್ನಾಗಿ ಹುಬ್ಬಳ್ಳಿ- ಧಾರವಾಡ ಮಹಾನಗರ ಪಾಲಿಕೆ ಮಾಜಿ ಸದಸ್ಯ ಶಿವಾನಂದ ಮುತ್ತಣ್ಣವರ ಅವರನ್ನು ಕೆಪಿಸಿಸಿ ಮಾಧ್ಯಮ ಮತ್ತು ಸಂವಹನ ವಿಭಾಗದ ಅಧ್ಯಕ್ಷ ರಮೇಶ ಬಾಬು ನೇಮಕ ಮಾಡಿ ಆದೇಶಿಸಿದ್ದಾರೆ. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ ಸೂಚನೆ ಮೇರೆಗೆ ಈ ನೇಮಕ ಮಾಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಮಹಿಳೆ ವಿವಸ್ತ್ರ ಪ್ರಕರಣ: ಸಿಐಡಿಯಿಂದ ದಾಖಲೆಗಳ ಪರಿಶೀಲನೆ

ಹುಬ್ಬಳ್ಳಿ: ಮಹಿಳೆ ವಿವಸ್ತ್ರ ಪ್ರಕರಣದ ತನಿಖೆ ನಡೆಸುತ್ತಿರುವ ಸಿಐಡಿ ತಂಡವು ಕಳೆದ ಎರಡು ದಿನಗಳಿಂದ ಕೇಶ್ವಾಪುರ ಠಾಣೆಯಲ್ಲಿ ಬೀಡು ಬಿಟ್ಟಿದೆ. ಬಿಜೆಪಿ ಕಾರ್ಯಕರ್ತೆ ಸುಜಾತಾ ಹಂಡಿ ಅವರನ್ನು ಬಂಧಿಸುವ ವೇಳೆ ಪೊಲೀಸರು ವಿವಸ್ತ್ರಗೊಳಿಸಿದ್ದಾರೆ ಎಂಬ ಆರೋಪ ಕೇಳಿ ಬಂದಿತ್ತು. ಬಿಜೆಪಿ ಪ್ರತಿಭಟನೆಯಿಂದಾಗಿ ಸರ್ಕಾರ ತನಿಖೆಯನ್ನು ಸಿಐಡಿಗೆ ಒಪ್ಪಿಸಿದೆ. 3 ದಿನಗಳಿಂದ ತನಿಖೆ ನಡೆಸುತ್ತಿರುವ ತಂಡವು ಎರಡು ದಿನಗಳಿಂದ ಠಾಣೆಯಲ್ಲಿನ ದಾಖಲೆಗಳ ಪರಿಶೀಲನೆ ನಡೆಸುತ್ತಿದೆ. ಸುಜಾತಾ ಹಂಡಿ ಅವರ ಕುಟುಂಬಸ್ಥರಿಂದಲೂ ಮಾಹಿತಿ ಪಡೆದಿದೆ ಎಂದು ಮೂಲಗಳು ತಿಳಿಸಿವೆ.

ಕವಿವಿ ಜ.15ರ ನಿಗದಿತ ಪರೀಕ್ಷೆಗಳು ಮುಂದೂಡಿಕೆ

ಧಾರವಾಡ: ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿ ಬರುವ ಧಾರವಾಡ, ಗದಗ, ಕಾರವಾರ ಹಾಗೂ ಹಾವೇರಿ ಜಿಲ್ಲಾ ವ್ಯಾಪ್ತಿಯಲ್ಲಿ ಎಲ್ಲ ಸ್ನಾತಕ ಪದವಿಯ 1, 3, 5 ಮತ್ತು 7ನೇ ಸೆಮೆಸ್ಟರ್‌ಲಿಖಿತ ಪರೀಕ್ಷೆಗಳು ಜ. 5ರಿಂದ ಪ್ರಾರಂಭಗೊಂಡಿವೆ. ಆದರೆ, ಜ. 15ರಂದು ಮಕರ ಸಂಕ್ರಾಂತಿ ಹಬ್ಬದ ನಿಮಿತ್ತ ಸರ್ಕಾರಿ ರಜೆ ಇರುವುದರಿಂದ ಮಂಗಳವಾರ ನಿಗದಿಯಾಗಿದ್ದ ಎಲ್ಲ ಪರೀಕ್ಷೆಗಳನ್ನು ಮುಂದೂಡಲಾಗಿದೆ. ಈ ಪರೀಕ್ಷೆ ಜರುಗುವ ದಿನಾಂಕವನ್ನು ಮರುನಿಗದಿಪಡಿಸಿ ಕವಿವಿ ಅಂತರ ಜಾಲ ತಾಣವಾದ www.kud.ac.in (Notification) ಪ್ರಕಟಿಸಲಾಗಿದೆ. ತಿದ್ದುಪಡಿ ವೇಳಾಪಟ್ಟಿಯ ಕುರಿತು ಹೆಚ್ಚಿನ ಮಾಹಿತಿಗಾಗಿ ಮಹಾವಿದ್ಯಾಲಯಗಳ ಪ್ರಾಚಾರ್ಯರು, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಕವಿವಿ ಅಂತರ್ಜಾಲ ತಾಣವನ್ನು ವೀಕ್ಷಿಸಬೇಕೆಂದು ಕರ್ನಾಟಕ ವಿಶ್ವವಿದ್ಯಾಲಯ ಮೌಲ್ಯಮಾಪನ ಕುಲಸಚಿವರಾದ ಪ್ರೊ.ನಿಜಲಿಂಗಪ್ಪಮಟ್ಟಿಹಾಳ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಯುವಕ ಆತ್ಮಹತ್ಯೆ

ಹುಬ್ಬಳ್ಳಿ: ಮನನೊಂದಿದ್ದ ಯುವಕನೊಬ್ಬ ಮನೆಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡ ಘಟನೆ ಇಲ್ಲಿಯ ನವನಗರದ ಶಿವಾನಂದ ನಗರದಲ್ಲಿ ಸೋಮವಾರ ನಡೆದಿದೆ. ಕಾಂತೇಶ ಕಮಲಾಪುರ(23) ಮೃತ ಯುವಕ. ಕೆಲ ದಿನಗಳಿಂದ ಮಾನಸಿಕವಾಗಿ ನೊಂದಿದ್ದ. ಇದರಿಂದಾಗಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ಕುರಿತು ನವನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಹಿಳಾ ಸ್ವ-ಸಹಾಯ ಗುಂಪುಗಳಿಂದ ಅರ್ಜಿ ಆಹ್ವಾನ

ಧಾರವಾಡ: ಕೇಂದ್ರ ಪುರಸ್ಕೃತ್ ಅಮೃತ್-2.0 ಅಭಿಯಾನದ ಅಮೃತ್ ಮಿತ್ರ ಕಾರ್ಯಕ್ರಮದ ತಾಂತ್ರಿಕೇತರ ಚಟುವಟಿಕೆಯಡಿ ಕಾರ್ಯಕ್ರಮದಡಿ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿನ ಸಾರ್ವಜನಿಕ ಉದ್ಯಾನವನ ಹಾಗೂ ಆಟದ ಮೈದಾನ ನಿರ್ವಹಣೆ ಮಾಡಲು ಡೇ-ಎನ್‌ಯುಎಲ್‌ಎಂ ಅಭಿಯಾನದಡಿ ಅರ್ಹ ಮಹಿಳಾ ಸ್ವ-ಸಹಾಯ ಗುಂಪುಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ನಗರ ಸ್ಥಳೀಯ ಸಂಸ್ಥೆಗಳಲ್ಲಿ ಅನುಷ್ಠಾನಗೊಳಿಸಲು ಆಸಕ್ತಿ ಇರುವ ಮಹಿಳಾ ಸ್ವ-ಸಹಾಯ ಗುಂಪುಗಳು ಭಾಗವಹಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದರು.

ನಾಲ್ಕು ಕಾರ್ಮಿಕ ಸಂಹಿತೆಯಿಂದ ಕಾರ್ಮಿಕ, ಕೈಗಾರಿಕಾ ವಲಯಕ್ಕೆ ಬಲ

4 ಕಾರ್ಮಿಕ ಸಂಹಿತೆಯ ಜಾಗೃತಿ ಕಾರ್ಯಾಗಾರದಲ್ಲಿ ಸಚಿವೆ ಶೋಭಾ ಕರಂದ್ಲಾಜೆ

• **ಕನ್ನಡಪ್ರಭ ವಾರ್ತೆ** ಹುಬ್ಬಳ್ಳಿ

ಕೇಂದ್ರ ಸರ್ಕಾರ ಜಾರಿಗೆ ತರಲು ನಿರ್ಧರಿಸಿರುವ ನಾಲ್ಕು ಕಾರ್ಮಿಕಸಂಹಿತೆಗಳುಕಾರ್ಮಿಕರು, ಕೈಗಾರಿಕೋದ್ಯಮಿಗಳು ಹಾಗೂ ದೇಶದ ಅಭಿವೃದ್ಧಿಗೆ ಪೂರಕವಾಗಿವೆ. ಈ ಕಾರ್ಮಿಕ ಸಂಹಿತೆಗಳ ಬಗ್ಗೆ ಅತ್ಯಂತ ವಿಸ್ತೃತವಾಗಿ ಚರ್ಚಿಸಲಾಗಿದೆ. ಶೇ. 95 ರಾಜ್ಯಗಳು ಕಾರ್ಮಿಕ ಸಂಹಿತೆಗೆ ಒಪ್ಪಿಗೆ ಸೂಚಿಸಿವೆ ಎಂದು ಕೇಂದ್ರದ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳು (ಎಂಎಸ್‌ಎಂಇ) ಹಾಗೂ ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯದ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಹೇಳಿದರು.

ಇಲ್ಲಿನ ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆಯ ಸಭಾಂಗಣದಲ್ಲಿ ಆಯೋಜಿಸಿದ್ದ ನಾಲ್ಕು ಕಾರ್ಮಿಕ ಸಂಹಿತೆ ಕುರಿತು ಜಾಗೃತಿ ಹಾಗೂ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಕೇಂದ್ರ ಸರ್ಕಾರ ಅತ್ಯಂತ ಮುಂದಾಲೋಚನೆ ಮಾಡಿ ನಾಲ್ಕು ಕಾರ್ಮಿಕ ಸಂಹಿತೆಗಳನ್ನು ಜಾರಿತರಲು ಮುಂದಾಗಿದೆ. ಈ ಸಂಹಿತೆಗಳು ಕೈಗಾರಿಕಾ ಹಾಗೂ ಕಾರ್ಮಿಕ ವಲಯ ಬಲ ಪಡಿಸುತ್ತದೆ. ಅಸಂಘಟಿತ ಕಾರ್ಮಿಕರಿಗೆ ಭದ್ರತೆ ಕಲ್ಪಿಸಲಿದೆ. ಕಾರ್ಮಿಕರಿಗೆ ಸೇವಾ, ವೇತನ, ಸಾಮಾಜಿಕ ಭದ್ರತೆ ಕಲ್ಪಿಸುತ್ತದೆ.

ನಮ್ಮಲ್ಲಿ ಬ್ರಿಟಿಷ್ ಸರ್ಕಾರದ ಅವಧಿಯಲ್ಲಿನ ಕಾನೂನುಗಳಿದ್ದವು. ಅವರು ಗುಲಾಮಗಿರಿ, ತಮ್ಮ ಹಿಡಿತದಲ್ಲಿಟ್ಟುಕೊಳ್ಳುವ ಉದ್ದೇಶದಿಂದ ತಂದಂತಹ ಕಾನೂನುಗಳಾಗಿದ್ದವು. ಅವುಗಳನ್ನು ಬದಲಾಯಿಸಿ ನಾಲ್ಕು ಸಂಹಿತೆ ಮಾಡಲಾಗಿದೆ. ಈ ಸಂಬಂಧ ಟ್ರೇಡ್ ಯೂನಿಯನ್‌ಗಳು, ತಜ್ಞರು, ಕೈಗಾರಿಕಾ ಸಂಸ್ಥೆಗಳು ಹೀಗೆ ಬರೋಬ್ಬರಿ 104 ಸಲ ಸಭೆ ನಡೆಸಲಾಗಿದೆ ಎಂದರು.

ಶೇ. 95ರಷ್ಟು ರಾಜ್ಯಗಳು ಸ್ವಾಗತಿಸಿದ್ದು, ಉಳಿದ ರಾಜ್ಯಗಳ ವಿಶ್ವಾಸವನ್ನೂ ಪಡೆಯಲಾಗುವುದು. ದೇಶದಲ್ಲಿ 7.40 ಕೋಟಿ ಎಂಎಸ್‌ಎಂಇ ಉದ್ಯಮಿಗಳು ಪೋರ್ಟಲ್‌ನಲ್ಲಿ ನೋಂದಣಿ ಮಾಡಿಸಿದ್ದು, 33 ಕೋಟಿ ನೌಕರರಿದ್ದಾರೆ ಎಂದು ತಿಳಿಸಿದ್ದಾರೆ. ಇದರ ಸಂಖ್ಯೆ ಇನ್ನೂ ಹೆಚ್ಚಾಗಬೇಕು ಎಲ್ಲರೂ ಪೋರ್ಟಲ್‌ನಲ್ಲಿ ನೋಂದಣಿಮಾಡಿಸಿಲ್ಲ. ದೇಶದಒಟ್ಟುಉತ್ಪಾದನೆಯಲ್ಲಿ ಎಂಎಸ್‌ಎಂಇ ಕೊಡುಗೆಶೇ. 45ರಷ್ಟಿದೆ. ಜಿಡಿಪಿಯಲ್ಲೂ ಸಾಕಷ್ಟುಪಾತ್ರ ಹೊಂದಿವೆ. ದೇಶಒಟ್ಟುಉತ್ಪಾದನೆಯಲ್ಲಿ ಇನ್ನೂ ರಫ್ತಿನಲ್ಲಿಯೂ ಶೇ. 40ರಷ್ಟು ಎಂಎಸ್‌ಎಂಇಗಳ ಕೊಡುಗೆ ಇದೆ ಎಂದರು.

ಕಾರ್ಯಕ್ರಮದಲ್ಲಿ ಸಚಿವೆ ಶೋಭಾ ಕರಂದ್ಲಾಜೆ ಮಾತನಾಡಿದರು

> **ದೇಶದ ಒಟ್ಟು ಉತ್ಪಾದನೆಯಲ್ಲಿ ಎಂಎಸ್‌ಎಂಇ ಕೊಡುಗೆ ಶೇ. 45ರಷ್ಟಿದೆ. ಜಿಡಿಪಿಯಲ್ಲೂ ಸಾಕಷ್ಟು ಪಾತ್ರ ಹೊಂದಿವೆ. ದೇಶ ಒಟ್ಟು ಉತ್ಪಾದನೆಯಲ್ಲಿ ಇನ್ನೂ ರಫ್ತಿನಲ್ಲಿಯೂ ಶೇ. 40ರಷ್ಟು ಎಂಎಸ್‌ಎಂಇಗಳ ಕೊಡುಗೆ ಇದೆ.**
> • **ಶೋಭಾ ಕರಂದ್ಲಾಜೆ** ಸಚಿವೆ

ಸದ್ಯ ವಿಶ್ವದಲ್ಲಿ ಕೃತಕ ಬುದ್ಧಿಮತ್ತೆ(ಎಐ), ರೋಬೋಟಿಕ್, ಏರೋಸ್ಪೇಸ್ ಬಹಳ ಬೇಡಿಕೆಗಳಿದ್ದು, ಈ ನಿಟ್ಟಿನಲ್ಲಿ ಎಂಎಸ್‌ಎಂಇಗಳು ಬದಲಾವಣೆಯಾಗಬೇಕಿದೆ. ಜತೆಗೆ ಯುವ ಸಮೂಹಕ್ಕೆ ಅಗತ್ಯಕ್ಕೆ ತಕ್ಕಂತೆ ಉದ್ಯಮ ಸ್ಥಾಪಿಸಲು ಪ್ರೋತ್ಸಾಹಿಸಬೇಕು ಎಂದು ತಿಳಿಸಿದರು.

ದೇಶದ ಆಹಾರಕ್ಕೆ ವಿದೇಶದಲ್ಲಿ ಭಾರೀ ಬೇಡಿಕೆ ಇದೆ. ಆದ್ದರಿಂದ ಆಹಾರ ಸಂಸ್ಕರಣೆ ಮಾಡುವ ಉದ್ಯಮಿಗಳು ಪ್ಯಾಕಿಂಗ್ ಗುಣಮಟ್ಟ ಹಾಗೂ ಮೌಲ್ಯಗಳ ಉತ್ತಮ ಪಡಿಸಿಕೊಳ್ಳಬೇಕಿದೆ. ಸದ್ಯ ದೇಶದಲ್ಲಿ ಗಿಗ್ 5.5 ಲಕ್ಷ ಕಾರ್ಮಿಕರಿದ್ದಾರೆ. ಇನ್ನೂ ಐದು ವರ್ಷದಲ್ಲಿ 25 ಲಕ್ಷಕ್ಕೆ ಮುಟ್ಟುವ ಸಾಧ್ಯತೆ ತಳ್ಳಿ ಹಾಕುವಂತಿಲ್ಲ. ಅಸಂಘಟಿತ ಕಾರ್ಮಿಕರಿಗೂ ಭದ್ರತೆ ಒದಗಿಸುವ ಕೆಲಸ ಕಾರ್ಮಿಕ ಸಂಹಿತೆ ಮಾಡಲಿದೆ ಎಂದರು. ಸಂಹಿತೆಯಲ್ಲಿ ಮುಂದೆ ಬದಲಾವಣೆಗೂ ಸಾಕಷ್ಟು ಅವಕಾಶವುಂಟು. ಜತೆಗೆ ಆಯಾ ರಾಜ್ಯಗಳಿಗನುಗುಣವಾಗಿ ಅಲ್ಪಸ್ವಲ್ಪ ಬದಲಾವಣೆ ಮಾಡಿಕೊಳ್ಳಲು ಅವಕಾಶವಿದೆ. ಕಾರ್ಮಿಕ ಮಕ್ಕಳಿಗೆ ವೈದ್ಯಕೀಯ ಸೀಟು ಪಡೆಯಲು ಶೇ.25ರಷ್ಟು ಮೀಸಲಾತಿ ನೀಡಲಾಗಿದೆ ಎಂದು ಹೇಳಿದರು.

ಕಾರ್ಮಿಕಸಂಹಿತೆಗಳಬಗ್ಗೆಕೈಗಾರಿಕಾವಲಯಗಳಲ್ಲಿನ ಕಾರ್ಮಿಕರಿಗೆ ಮನವರಿಕೆ ಮಾಡಿಕೊಡುವ ಕೆಲಸ ಟ್ರೇಡ್ ಯೂನಿಯನ್, ವಾಣಿಜ್ಯೋದ್ಯಮ ಸಂಸ್ಥೆಗಳು ಮಾಡಬೇಕು ಎಂದರು.

ಶಾಸಕ ಮಹೇಶ ಟೆಂಗಿನಕಾಯಿ, ಕೈಗಾರಿಕೆ ಹಾಗೂ ಉದ್ಯಮ ವಾತಾವರಣ ಬಲ ಪಡಿಸುವ ನಿಟ್ಟಿನಲ್ಲಿ ನಾಲ್ಕು ಕಾರ್ಮಿಕ ಸಂಹಿತೆಗಳ ಜಾರಿಗೆ ತರಲಾಗುತ್ತಿದೆ. ಇದರಿಂದಉದ್ಯೋಗಸೃಷ್ಟಿಹೆಚ್ಚಾಗಲಿದೆ.ಪಾರದರ್ಶಕ, ಸ್ಥಿರತೆ, ಅನುಷ್ಠಾನ ಭದ್ರತೆ ಸಿದ್ಧಪಡಿಸಿದೆ ಎಂದು ಹೇಳಿದರು.

ಹಿರಿಯ ಕಾರ್ಮಿಕ ಆಯುಕ್ತ ಎಸ್.ಕೆ. ಮೋಹಂತಿ, ಕೆಸಿಸಿಐ ಅಧ್ಯಕ್ಷ ಜಿ.ಕೆ. ಆದಪ್ಪಗೌಡರ, ಗೌರವ ಕಾರ್ಯದರ್ಶಿ ಉದಯ ರೇವಣಕರ, ಆರಿಫ್ ಲೋಹಾನಿ, ಪ್ರವೀಣ ಅಗಡಿ, ಪ್ರಕಾಶ ಶೃಂಗೇರಿ, ಸಚಿನ ಮಹೇಂದ್ರಕರ ಇದ್ದರು.

ಖಾದಿ ರಾಷ್ಟ್ರಧ್ವಜ ಉತ್ತೇಜನಾ ಅಭಿಯಾನ

• **ಕನ್ನಡಪ್ರಭ ವಾರ್ತೆ ಹುಬ್ಬಳ್ಳಿ**

ಖಾದಿ ಧ್ವಜಗಳ ಮಾರಾಟ ಗಣನೀಯ ಪ್ರಮಾಣದಲ್ಲಿ ಇಳಿಕೆ ಕಂಡಿದೆ. ಈ ಕುರಿತು ಜನರಲ್ಲಿ ಅರಿವು ಮೂಡಿಸುವುದಕ್ಕಾಗಿ 'ಖಾದಿ ರಾಷ್ಟ್ರಧ್ವಜ ಉತ್ತೇಜನಾ ಅಭಿಯಾನ' ಹಮ್ಮಿಕೊಳ್ಳಲಾಗಿದೆ ಎಂದು ಅಭಿಯಾನದ ಸಂಯೋಜಕ ಸಂತೋಷ ನರಗುಂದ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರ ಸರ್ಕಾರ ಧ್ವಜ ಸಂಹಿತೆಗೆ ತಿದ್ದುಪಡಿ ತಂದು ಪಾಲಿಸ್ಟರ್ ತ್ರಿವರ್ಣ ಧ್ವಜಗಳ ಮಾರಾಟಕ್ಕೆ ಅನುಮತಿ ನೀಡಿದ್ದರಿಂದ ಖಾದಿ ಧ್ವಜಗಳ ಬೇಡಿಕೆ, ಮಾರಾಟ ಗಣನೀಯ ಪ್ರಮಾಣದಲ್ಲಿ ಕುಸಿತ ಕಂಡಿದೆ. ಬೆಂಗೇರಿಯ ಖಾದಿ ಗ್ರಾಮೋದ್ಯೋಗ ಸಂಸ್ಥೆಯಲ್ಲಿ ₹2 ಕೋಟಿ ಮೌಲ್ಯದ ರಾಷ್ಟ್ರಧ್ವಜಗಳು ಮಾರಾಟವಾಗದೇ ಹಾಗೆ ಉಳಿದಿವೆ. ಜತೆಗೆ ಖಾದಿ ಕುಶಲಕರ್ಮಿಗಳಿಗೆ ದೊಡ್ಡ ಹೊಡೆತ ಬಿದ್ದಿದೆ ಎಂದರು.

ಈ ಹಿನ್ನೆಲೆಯಲ್ಲಿ ಜನರಲ್ಲಿ ಖಾದಿ ರಾಷ್ಟ್ರಧ್ವಜ ಕುರಿತು ಜಾಗೃತಿ ಮೂಡಿಸುವ ದೃಷ್ಟಿಯಿಂದ ಮೂರು ಆಯಾಮಗಳಲ್ಲಿ ಈ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಭಾರತೀಯ ಮಾನದಂಡದ ಬ್ಯುರೋ (ಬಿಐಎಸ್) ಪ್ರಮಾಣೀಕೃತ ಖಾದಿ ರಾಷ್ಟ್ರಧ್ವಜದ ಕುರಿತು ಜನರಲ್ಲಿ ಅರಿವು,ಖರೀದಿಸುವಂತೆಜಾಗೃತಿಮೂಡಿಸಲಾಗುವುದು. ಇ- ಕಾಮರ್ಸ್ ಮೂಲಕ ದೇಶ ಮತ್ತು ಜಗತ್ತಿನಾದ್ಯಂತ ಅಂತರ್ಜಾಲದ ಮೂಲಕ ಖಾದಿ ರಾಷ್ಟ್ರಧ್ವಜ ಪೂರೈಸಲು ಕ್ರಮ ಕೈಗೊಳ್ಳಲಾಗುವುದು ಎಂದರು.

ಭಾರತೀಯ ಧ್ವಜ ಸಂಹಿತೆಯ ವಿಭಾಗ 1.2ರಲ್ಲಿನ ತಿದ್ದುಪಡಿಯಾದ ಯಂತ್ರ ನಿರ್ಮಿತ ಪಾಲಿಸ್ಟರ್‌ಧ್ವಜಗಳ ಅನುಮತಿ ಹಿಂಪಡೆಯಬೇಕು, ಎಲ್ಲ ಸರ್ಕಾರಿ ಹಾಗೂ ಸರ್ಕಾರೇತರ ಕಚೇರಿ, ಸಂಘ- ಸಂಸ್ಥೆ, ಶಾಲಾ-ಕಾಲೇಜುಗಳಲ್ಲಿ ಖಾದಿ ರಾಷ್ಟ್ರಧ್ವಜ ಬಳಕೆಗೆ ಆದೇಶಿಸಬೇಕು, ಖಾದಿ ರಾಷ್ಟ್ರಧ್ವಜ ತಯಾರಿಕಾ ಘಟಕಗಳನ್ನು ಆಧುನೀಕರಣಗೊಳಿಸಿ ರಾಷ್ಟ್ರೀಯ ಧಾಮವಾಗಿ ನಿರ್ಮಾಣ ಮಾಡಬೇಕು ಎಂದು ಸರ್ಕಾರಕ್ಕೆ ಒತ್ತಾಯಿಸಿದರು.

ರಾಷ್ಟ್ರಧ್ವಜ ತಯಾರಿಸುವ ನೇಕಾರರಿಗೆ ರಾಜ್ಯ ಸರ್ಕಾರದಿಂದ ಎಂಡಿಎ ಹಾಗೂ ಪ್ರೋತ್ಸಾಹಧನ ₹130 ಕೋಟಿ ಬಾಕಿ ಇದೆ. ಇದನ್ನು ಕೂಡಲೇ ಬಿಡುಗಡೆ ಮಾಡಬೇಕು.

ಸರ್ಕಾರಿ ನೌಕರರು ಹಾಗೂ ವಿದ್ಯಾರ್ಥಿಗಳು ವಾರದಲ್ಲಿ ಒಂದು ದಿನ ಕಡ್ಡಾಯವಾಗಿ ಖಾದಿ ಬಟ್ಟೆ ಧರಿಸುವುದನ್ನು ಕಡ್ಡಾಯಗೊಳಿಸಬೇಕು. ಜನಪ್ರತಿನಿಧಿಗಳು ಈ ಅಭಿಯಾನಕ್ಕೆ ಕೈಜೋಡಿಸಬೇಕು ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಅಭಿಯಾನದ ಸಹ ಸಂಯೋಜಕ ಶಾಮ ನರಗುಂದ, ಲಿಂಗರಾಜ ಧಾರವಾಡಶೆಟ್ಟರ್, ಅನಿತಾ ಕಡಗಲ್, ಕೆ.ವಿ. ಪತ್ತಾರ, ರಮೇಶ, ಕರ್ನಾಟಕ ಖಾದಿ ಗ್ರಾಮೋದ್ಯೋಗ ಸಂಯುಕ್ತ ಸಂಘದ ಕಾರ್ಯದರ್ಶಿ ಶಿವಾನಂದ ಮಠಪತಿ ಸೇರಿದಂತೆ ಹಲವರಿದ್ದರು.

ದಕ್ಷಿಣ ಭಾರತ ಮುಕ್ತ ಕರಾಟೆಯಲ್ಲಿ ಎಸ್‌ಬಿಐ ಶಾಲೆ ಸಾಧನೆ

• **ಕನ್ನಡಪ್ರಭ ವಾರ್ತೆ** ಹುಬ್ಬಳ್ಳಿ

ನಗರದ ವಾಸವಿ ಮಹಲ್‌ನಲ್ಲಿ ಭಾನುವಾರ ನಡೆದ ದಕ್ಷಿಣ ಭಾರತ ಮುಕ್ತ ಕರಾಟೆ ಚಾಂಪಿಯನ್‌ಶಿಪ್‌ನಲ್ಲಿ ಎಸ್‌ಬಿಐ ಶಾಲೆಯ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದಾರೆ. ಕರಾಟೆ ಸ್ಪರ್ಧೆಯಲ್ಲಿ ವೈಷ್ಣವಿ ಸಬನೀಸ್- 2ನೇ ಸ್ಥಾನ(ಕಟಾ), ಜೀವಿತ್ ಕುರ್ಮಾ- 3ನೇ ಸ್ಥಾನ(ಕಟಾ), ಚಂದ್ರಶೇಖರ ಎಂ. ಆರಳಿ- 2ನೇ ಸ್ಥಾನ(ಕಟಾ), 3ನೇ ಸ್ಥಾನ(ಫೈಟ್), ಪವನ್ ಕುಮಾರ್- 2ನೇ ಸ್ಥಾನ(ಫೈಟ್), ಸ್ಪಂದನಾ ಕೆ. ಕ್ಯಾರಕಟ್ಟಿ- 2ನೇ ಸ್ಥಾನ(ಕಟಾ), 3ನೇ ಸ್ಥಾನ(ಫೈಟ್), ಪರಮ್ ಎಸ್. ಸೂರ್ಯವಂಶಿ- 3ನೇ ಸ್ಥಾನ(ಕಟಾ), ಆಧ್ಯ ವಿ. ಸೂರ್ಯವಂಶಿ- 3ನೇ ಸ್ಥಾನ(ಕಟಾ) 3ನೇ ಸ್ಥಾನ(ಫೈಟ್) ಪಡೆದಿದ್ದಾರೆ. ಈ ವಿದ್ಯಾರ್ಥಿಗಳಿಗೆ ವಿಜಯ ಮೇತ್ರಿ ತರಬೇತಿ ನೀಡಿದ್ದಾರೆ. ಸಾಧನೆ ತೋರಿದ ವಿದ್ಯಾರ್ಥಿಗಳನ್ನು ಪ್ರಾಂಶುಪಾಲರಾದ ಪ್ರತಿಭಾ ಹಿರೇಮಠ ಹಾಗೂ ಆಡಳಿತ ಮಂಡಳಿಯವರು, ಬೋಧಕ, ಬೋಧಕೇತರ ಸಿಬ್ಬಂದಿ ಅಭಿನಂದಿಸಿದ್ದಾರೆ.

ಸಾಧನೆ ಮಾಡಿರುವ ವಿದ್ಯಾರ್ಥಿಗಳ ಜತೆ ಶಾಲೆಯ ಪ್ರಾಂಶುಪಾಲರು, ಕರಾಟೆ ತರಬೇತಿದಾರರು ಇದ್ದಾರೆ.

ಕುಡಿದು ಕಟ್ಟಡದ ಮೇಲಿಂದ ಬಿದ್ದು ಮೃತಪಟ್ಟಿರುವಂತೆ ಬಿಂಬಿಸಿದ್ದ ಆರೋಪಿಗಳು | ವಿಚಾರಣೆ ವೇಳೆ ಕೃತ್ಯ ಬಯಲಿಗೆ

ಗುತ್ತಿಗೆದಾರನ ಕೊಲೆ ಪ್ರಕರಣ: ಮೂರು ಆರೋಪಿಗಳ ಬಂಧನ

• **ಕನ್ನಡಪ್ರಭ ವಾರ್ತೆ** ಹುಬ್ಬಳ್ಳಿ

ಅನೈತಿಕ ಸಂಬಂಧದ ಹಿನ್ನೆಲೆಯಲ್ಲಿ ಕಟ್ಟಡ ಗುತ್ತಿಗೆದಾರನನ್ನು ಕೊಲೆ ಮಾಡಿರುವ ಆರೋಪದ ಮೇಲೆ ನವನಗರ ಠಾಣೆ ಪೊಲೀಸರು ಛತ್ತೀಸಗಡ ಮೂಲದ ಮೂವರು ಕಾರ್ಮಿಕರನ್ನು ಬಂಧಿಸಿದ್ದಾರೆ.

ಮೇಘವ್

ವಿಮಲಾ

ಭಗವಾನದಾಸ್

ವಿಜಯಪುರ ಜಿಲ್ಲೆಯ ತಿಕ್ಕೋಟಾದ ಕಟ್ಟಡ ಗುತ್ತಿಗೆದಾರ ವಿಠ್ಠಲ್ ರಾಠೋಡ್ (60) ಕೊಲೆಗೀಡಾದ ವ್ಯಕ್ತಿ. ಛತ್ತೀಸಗಡದ ಮೇಘವ್ ಸತನಾಮಿ, ವಿಮಲಾ ಸತನಾಮಿ ಮತ್ತು ಭಗವಾನದಾಸ್ ಸತನಾಮಿ ಕೊಲೆ ಮಾಡಿದ ಆರೋಪಿಗಳು.

ವಿಮಲಾ ಅವರು ವಿಠ್ಠಲ್ ಜತೆ ಅನೈತಿಕ ಸಂಬಂಧ ಇಟ್ಟುಕೊಂಡಿದ್ದಕ್ಕೆ ಕೋಪಗೊಂಡ ಅವರ ಪತಿ ಮೇಘವ್ ತನ್ನ ಪುತ್ರ ಭಗವಾನದಾಸ್ ಜತೆ ಸೇರಿಕೊಂಡು ಕಳೆದ ಶನಿವಾರ ರಾತ್ರಿ ಬಡಿಗೆಯಿಂದ ಹೊಡೆದು ಕೊಲೆ ಮಾಡಿದ್ದಾರೆ ಎಂದು ಆರೋಪಿಸಿ ವಿಠ್ಠಲ್ ಅವರ ಪುತ್ರ ಸುನೀಲ್ ದೂರು ದಾಖಲಿಸಿದ್ದಾರೆ.

ಈ ಕುರಿತು ಮಾಹಿತಿ ನೀಡಿದ ಹು-ಧಾ ಮಹಾನಗರ ಪೊಲೀಸ್ ಆಯುಕ್ತ ಎನ್. ಶಶಿಕುಮಾರ್, ಗುತ್ತಿಗೆದಾರ ವಿಠ್ಠಲ್ ಅವರು, ಕಾನೂನು ವಿವಿ ಆಡಳಿತ ಸೌಧದಲ್ಲಿನ ಕೆಲವು ಕೆಲಸಗಳನ್ನು ಗುತ್ತಿಗೆ ಪಡೆದು, ಛತ್ತೀಸಘಡ ಮೂವರು ಕಾರ್ಮಿಕರು ಇರುವ ಕುಟುಂಬದಿಂದ ಕೆಲಸ ಮಾಡಿಸುತ್ತಿದ್ದರು. ಕುಟುಂಬದ ಮಹಿಳೆಯೊಂದಿಗೆ ವಿಠ್ಠಲ್ ಸಲುಗೆಯಿಂದ ಇದ್ದರು. ಇದನ್ನು ಕಂಡ ವಿಮಲಾ ಪತಿ ಹಾಗೂ ಪುತ್ರನು ವಿಠ್ಠಲರೊಂದಿಗೆ ಜಗಳವಾಡಿದ್ದಾರೆ. ಈವೇಳೆಕೋಪಗೊಂಡ ಮಗ ಭಗವಾನದಾಸ್ ಬಡಿಗೆಯಿಂದ ವಿಠ್ಠಲರ ತಲೆಗೆ ಹೊಡೆದಿದ್ದು ಸ್ಥಳದಲ್ಲಿಯೇ ಮೃತಪಟ್ಟಿದ್ದಾನೆ. ನಂತರ ಕುಡಿದು ಮೃತಪಟ್ಟಿದ್ದಾರೆ ಎಂದು ಸಾಕ್ಷ್ಯಗಳನ್ನು ನಾಶ ಮಾಡಿ, ಘಟನೆ ಮುಚ್ಚಿಹಾಕಲು ಯತ್ನಿಸಿದ್ದರು ಎಂದು ವಿವರಿಸಿದರು.

ಏನಿದು ಪ್ರಕರಣ?

ನವನಗರದ ಕಾನೂನು ವಿವಿ ಆಡಳಿತ ಭವನದ ಶೆಡ್ ಬಳಿ ಜ. 10ರಂದು ರಾತ್ರಿ 9.30ರ ವೇಳೆಗೆ ವಿಠ್ಠಲ್ ಅವರ ಶವ ಪತ್ತೆಯಾಗಿತ್ತು. ಕುಡಿದು ಬಿದ್ದು ಮೃತಪಟ್ಟಿರುವ ಅನುಮಾನದ ಮೇಲೆ ಪೊಲೀಸರು ಅಸ್ವಾಭಾವಿಕ ಸಾವು ಪ್ರಕರಣ ದಾಖಲಿಸಿಕೊಳ್ಳಲು ಮುಂದಾಗಿದ್ದರು. ಅನುಮಾನ ಬಂದು ಸ್ಥಳ ಪರಿಶೀಲನೆ ಹಾಗೂ ಸಾಕ್ಷಿಗಳ ವಿಚಾರಣೆ ನಡೆಸಿದ ವೇಳೆ ಕೊಲೆ ಎಂದು ತಿಳಿದು ಬಂದಿತ್ತು. ಆಗ ಶಂಕಿತರನ್ನು ವಶಕ್ಕೆ ಪಡೆದು ವಿಚಾರಣೆಗೊಳಪಡಿಸಿದ ಬಳಿಕ ಕೊಲೆ ಮಾಡಿರುವುದಾಗಿ ತಿಳಿದುಬಂದಿದೆ.

ರೈತರ ಸಮಸ್ಯೆಗಳಿಗೆ ಯಾರೂ ಸ್ಪಂದಿಸುತ್ತಿಲ್ಲ: ಸೊಬರಮಠ

• **ಕನ್ನಡಪ್ರಭ ವಾರ್ತೆ** ಧಾರವಾಡ

ಕಳೆದ ಎರಡು ವರ್ಷಗಳಿಂದ .ರೈತರ ಸಮಸ್ಯೆಗಳ ಬಗ್ಗೆ ಜಿಲ್ಲಾಧಿಕಾರಿ ಹಾಗೂ ಜಿಲ್ಲಾಡಳಿತ ಸರಿಯಾಗಿ ಸ್ಪಂದಿಸುತ್ತಿಲ್ಲ. ಈ ಕುರಿತು ಮುಖ್ಯಮಂತ್ರಿ ಹಾಗೂ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ದೂರು ನೀಡಿರುವುದಾಗಿ ರೈತ ಸೇನಾ ಕರ್ನಾಟಕ ರಾಜ್ಯಾಧ್ಯಕ್ಷ ವೀರೇಶ ಸೊಬರಮಠ ಆರೋಪಿಸಿದರು.

ನಗರದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, ಉಳುವವನೇ ಭೂ ಒಡೆಯ ಎಂಬ ಕಾನೂನಿನ ಪ್ರಕಾರ ರೈತರಿಗೆ ಕೊಟ್ಟ ಜಮೀನಿನ ಮೇಲೆ 15 ವರ್ಷಗಳ ಕಾಲ ಬೇರೆಯವರಿಗೆ ಪರಭಾರೆ ಮಾಡಬಾರ ದೆಂಬ ನಿಯಮ ವಿದೆ. ಸರ್ಕಾರದ ನಿಯಮ ಪ್ರಕಾರ 37 ವರ್ಷಗಳಾಗಿದ್ದು, ತಾಲೂಕಿನ ಹೆಬ್ಬಳ್ಳಿಯ ರೈತ ಸಿದ್ದಲಿಂಗಪ್ಪ ಗುಡಿ ಎಂಬುವರ ಜಮೀನು (237-2 ಎಂಟು ಎಕರೆ) ಮೇಲಿನ ಶರತ್ತು ಮುಗಿದರೂ ಜಿಲ್ಲಾಧಿಕಾರಿ ಪುನಃ ಹೊಸ ಶರತ್ತು ವಿಧಿಸಿ ಆದೇಶಿಸಿದ್ದಾರೆ. ಈ ಶರತ್ತು ತೆಗೆದು ಹಾಕಲು ರೈತ ಸಿದ್ದಲಿಂಗಪ್ಪ 2012ರಲ್ಲಿ ಅರ್ಜಿ ಸಲ್ಲಿಸಿ 13 ವರ್ಷಗಳಿಂದ ಅಲೆದಾಡುತ್ತಿದ್ದರೂ ಜಿಲ್ಲಾಡಳಿತದಿಂದ ಸ್ಪಂದನೆ ಸಿಗುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ಇದು ಹೆಬ್ಬಳ್ಳಿಯ ರೈತರೊಬ್ಬರ ಸಮಸ್ಯೆಯಲ್ಲ. ಇಂತಹ ಸಾಕಷ್ಟು ಪ್ರಕರಣಗಳು ತಹಸೀಲ್ದಾರರ ಪರಿಶೀಲನೆ ಬಳಿಕ ಜಿಲ್ಲಾಧಿಕಾರಿ ಕಚೇರಿಯಲ್ಲಿದ್ದು, ಸಮಸ್ಯೆಗೆ ಪರಿಹಾರ ದೊರೆಯುತ್ತಿಲ್ಲ. ಬರುವ ರೈತರಿಗೆ ಬರೀ ಭರವಸೆ ನೀಡಿ ಕಳುಹಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ದಿವ್ಯಪ್ರಭು ಅವರು ಈ ಬಗ್ಗೆ ಎಚ್ಚೆತ್ತು ರೈತರ ಸಮಸ್ಯೆಗಳಿಗೆ ಪರಿಹಾರ ನೀಡಬೇಕು ಎಂದು ಸೊಬರದಮಠ ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಮಲ್ಲಣ್ಣ ಅಲೇಕಾರ ಹಾಗೂ ಸುಭಾಸ ಬಾಳಿಕಾಯಿ ಇದ್ದರು.

ಹೆಬ್ಬಳ್ಳಿ ಜಮೀನಿನ ಕುರಿತು ಮಿಥ್ಯ ಆರೋಪ

ಧಾರವಾಡ: ಹೆಬ್ಬಳ್ಳಿ ಗ್ರಾಮದ ಸರ್ವೆ ನಂ. 237ರ ಕ್ಷೇತ್ರ 48 ಎಕರೆ ಜಮೀನನ್ನು ಹೊಸ ಶರ್ತಿನಿಂದ ಹಳೆ ಶರ್ತಿಗೆ ಪರಿವರ್ತಿಸಲು ಅರ್ಜಿ ಸಲ್ಲಿಸಿದ್ದು, ಅಗತ್ಯ ದಾಖಲೆಗಳು ಸಲ್ಲಿಕೆಮಾಡದಹಿನ್ನೆಲೆಯಲ್ಲಿಪ್ರಕರಣವನ್ನು ಜ. 19ಕ್ಕೆ ಮುಂದೂಡಲಾಗಿದೆ. ಈ ಕುರಿತಂತೆ ವೀರೇಶ ಸೊಬರದಮಠ ಸತ್ಯ ಮರೆಮಾಚಿ, ಪ್ರಕರಣದ ಕುರಿತು ಹಿರಿಯ ಅಧಿಕಾರಿಗಳ ಮೇಲೆ ಮಿಥ್ಯ ಆರೋಪ ಮಾಡಿದ್ದಾರೆ ಎಂದು ತಹಸೀಲ್ದಾರ್ ದೊಡ್ಡಪ್ಪ ಹೂಗಾರ ಸ್ಪಷ್ಟಪಡಿಸಿದ್ದಾರೆ. ಅರ್ಜಿದಾರರ ವಂಶವೃಕ್ಷ, ಅಡ್ಡ ಹೆಸರು ಪಹಣಿಯಲ್ಲಿ ಮತ್ತು ವಂಶವೃಕ್ಷದಲ್ಲಿ ಬೇರೆ ಇರುವದರಿಂದ ಒಂದು ಪ್ರತ್ಯೇಕ ಬಾಂಡ್ ಪೇಪರ್‌ಸಲ್ಲಿಸುವುದು, ಫಾರ್ಮ್ ನಂ 7 ಮತ್ತು 7ಎ ಅಡಿಯಲ್ಲಿ ಅರ್ಜಿ ದಾಖಾಲಾಗಿರದ ಕುರಿತು ಗೇಣಿ ರಹಿತ ಪ್ರಮಾಣಪತ್ರ ಸಲ್ಲಿಸುವುದು, ಭೂಧಾರಣ ಕ್ರಯ ತುಂಬಿದ ಚಲನ ಪ್ರತಿ ಹಾಗೂ ಕಬೂಲಾಯಿತಿ ಪತ್ರ, ಪಹಣಿ ಪತ್ರಿಕೆ ಕಾಲಂ 11 ರಲ್ಲಿ ಬ್ಯಾಂಕ್ ಬೋಜಾ ಇದ್ದು, ಬೋಜಾ ಕಡಿಮೆ ಮಾಡಿರುವ ಪಹಣಿ ಪತ್ರಿಕೆಗಳನ್ನು ಸಲ್ಲಿಸಲು ಧಾರವಾಡ ತಹಸೀಲ್ದಾರರು ಭೂ ಮಾಲೀಕರಿಗೆ ಜ. 7ರಂದು ತಿಳುವಳಿಕೆ ಪತ್ರ ಸಹ ನೀಡಿದ್ದಾರೆ.

2012ರಿಂದ ಈ ಪ್ರಕರಣ ಇದ್ದರೂ ಸರಿಯಾದ ಅಗತ್ಯ ದಾಖಲೆಗಳನ್ನು ಭೂಮಾಲೀಕರು ಸಲ್ಲಿಸಿಲ್ಲ. ಎಲ್ಲ ಸತ್ಯ ಗೊತ್ತಿದ್ದು, ಈ ರೀತಿಯಾಗಿ ಹಿರಿಯ ಅಧಿಕಾರಿಗಳ ಮೇಲೆ ಸೊಬರದಮಠ ಸುಳ್ಳು ಆರೋಪ ಮಾಡಿದ್ದಾರೆ ಎಂದು ತಹಸೀಲ್ದಾರ್ ಸ್ಪಷ್ಟಪಡಿಸಿದ್ದಾರೆ.

ಕ್ಷೇತ್ರೋತ್ಸವ ಧಾರವಾಡ ಪ್ರಾದೇಶಿಕ ತೋಟಗಾರಿಕೆ ಸಂಶೋಧನಾ ಕೇಂದ್ರದ ವಿಸ್ತರಣಾ ನಿರ್ದೇಶಕ ಡಾ. ಜೆ. ಬಿ.ಗೋಪಾಲ

ನವೀನ ತರಕಾರಿಗಳಿಂದ ಉತ್ತಮ ಆರೋಗ್ಯ

• **ಕನ್ನಡಪ್ರಭ ವಾರ್ತೆ** ಧಾರವಾಡ

ನವೀನ ತರಕಾರಿಗಳಿಂದ ಉತ್ತಮ ಆರೋಗ್ಯ, ಆದಾಯವೂ ದ್ವಿಗುಣ ಆಗುತ್ತದೆ ಎಂದು ಧಾರವಾಡ ಪ್ರಾದೇಶಿಕ ತೋಟಗಾರಿಕೆ ಸಂಶೋಧನಾ ಕೇಂದ್ರದ ವಿಸ್ತರಣಾ ನಿರ್ದೇಶಕ ಡಾ. ಜೆ. ಬಿ.ಗೋಪಾಲಿ ವಿಶ್ವಾಸ ವ್ಯಕ್ತಪಡಿಸಿದರು.

ಧಾರವಾಡ ಪ್ರಾದೇಶಿಕ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರದ ಅಖಿಲ ಭಾರತೀಯ ತರಕಾರಿ ಬೆಳೆಗಳ ಸಮನ್ವಯ ಸಂಶೋಧನಾ ಯೋಜನೆ ಅಡಿಯಲ್ಲಿ ಸೋಮವಾರ ಇಲ್ಲಿ ಆಯೋಜಿಸಿದ್ದ 'ನವೀನ ತರಕಾರಿ ಬೆಳೆಗಳ ಕ್ಷೇತ್ರೋತ್ಸವ 'ಉದ್ಘಾಟಿಸಿ ಅವರು ಮಾತನಾಡಿದರು.

ವಿಸ್ತರಣಾ ನಿರ್ದೇಶಕ ಡಾ. ಜೆ. ಬಿ. ಗೋಪಾಲಿ, ಈ ನವೀನ ತರಕಾರಿಗಳು ಆಂಟಿ ಆಕ್ಸಿಡೆಂಟ್, ಆಂಥೋಸಯಾನಿನ್, ವಿವಿಧ ವಿಟಮಿನ್‌ಗಳು ಹಾಗೂ ಕ್ಯಾಲ್ಸಿಯಂ ಸೇರಿದಂತೆ ಅನೇಕ ಪೋಷಕಾಂಶಗಳನ್ನು ಸಮೃದ್ಧವಾಗಿ ಒದಗಿಸುತ್ತವೆ. ನವೀನ ತರಕಾರಿಗಳಿಗಿರುವ ಅವಕಾಶಗಳನ್ನು ಹಾಗೂ ಇಂತಹ ಪೋಷಕಾಂಶ ಸಮೃದ್ಧತರಕಾರಿಗಳು ಮಾನವನ ಆರೋಗ್ಯವನ್ನು ಕಾಪಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ ಎಂದು ಅವರು ತಿಳಿಸಿದರು.

ನವೀನ ತರಕಾರಿ ಬೆಳೆಗಳ ಕ್ಷೇತ್ರೋತ್ಸವ' ಉದ್ಘಾಟಿಸಲಾಯಿತು.

ಸಂಪನ್ಮೂಲ ವಿಜ್ಞಾನಿ ಪ್ರಾಧ್ಯಾಪಕಿ ಡಾ. ನಮಿತಾ ರಾವುತ, ವಿವಿಧ ವಿದೇಶಿ ಬೆಳೆಗಳ ಪ್ರಾಮುಖ್ಯತೆ, ಅವುಗಳ ವಿಪುಲ ಅವಕಾಶ ಹಾಗೂ ಸುಧಾರಿತ ತಂತ್ರಜ್ಞಾನಗಳ ಕುರಿತು ರೈತರಿಗೆ ಮನವರಿಕೆ ಮಾಡಿದರು.

ಡಾ. ಚಂದ್ರಕಾಂತ ಕಾಂಬಳೆ, ಪೋಲ್ ಬೀನ್ಸ್ ತರಕಾರಿಯಲ್ಲಿ ಸುಧಾರಿತ ತಂತ್ರ ಜ್ಞಾನಗಳು ಹಾಗೂ ವೈಜ್ಞಾನಿಕ ಪದ್ಧತಿಗಳನ್ನು ಅಳವಡಿಸಿಕೊಂಡು ಬೆಳೆಸುವಂತೆ ರೈತರಿಗೆ ಸಲಹೆ ನೀಡಿದರು.

ತೋಟಗಾರಿಕೆ ಇಲಾಖೆಯ ಸಹಾಯಕ ತೋಟಗಾರಿಕೆ ನಿರ್ದೇಶಕ ವಿಜಯಕುಮಾರ ಯರ್ಗಿ ಹಾಗೂ ಬಸವರಾಜೇಶ್ವರಿ ಪಾಟೀಲ ಇಲಾಖಾ ಯೋಜನೆಗಳ ಕುರಿತಾಗಿ ರೈತರಿಗೆ ಮಾಹಿತಿ ನೀಡಿದರು. ಸಹ ಪ್ರಾಧ್ಯಾಪಕ ಡಾ. ಶಿವಯೋಗಿ ರಾವಳದ ರೈತರ ಆತ್ಮವಿಶ್ವಾಸ ಹೆಚ್ಚಿಸುವ ಪ್ರೇರಣಾತ್ಮಕ ಮಾತುಗಳನ್ನು ಹೇಳಿದರು.

ರೈತರೊಂದಿಗೆ ಸಂವಾದ: ಈ ತರಕಾರಿ ಬೆಳೆಗಳ ಕ್ಷೇತ್ರೋತ್ಸವದಲ್ಲಿ ಪೋಲ್ ಬೀನ್ಸ್, ಕೆಂಪು ಬಣ್ಣದ ಕ್ಯಾಬೇಜ್, ಚೈನೀಸ್ ಕ್ಯಾಬೇಜ್, ಪಾಕ್ಚೊಯ್, ಕೇಲ್, ಜುಕಣಿ ಸೇರಿದಂತೆ ವಿವಿಧ ತರಕಾರಿ ಗಳನ್ನು ಪ್ರದರ್ಶಿಸಲಾಯಿತು. ಉತ್ತಮ ಗುಣಮಟ್ಟದ ಈ ನವೀನ ತರಕಾರಿ ಬೆಳೆಗಳು ರೈತರ ಗಮನ ಸೆಳೆದವು. ಈ ಸಂದರ್ಭದಲ್ಲಿ, ಇಂತಹ ನವೀನ ತರಕಾರಿ ಗಳನ್ನು ಧಾರವಾಡದಲ್ಲಿ ತೆರೆದನೆಲದಲ್ಲಿಯಶಸ್ವಿಯಾಗಿಬೆಳೆಯಬಹುದೇ? ಅವುಗಳಿಗೆಮಾರುಕಟ್ಟೆಯಲ್ಲಿಬೇಡಿಕೆಇದೆಯೇ? ಎಂಬುದಾಗಿ ರೈತರು ಕೇಳಿದ ಪ್ರಶ್ನೆಗಳಿಗೆ ವಿಜ್ಞಾನಿಗಳು ರೈತರಿಗೆ ಅರ್ಥ ವಾಗುವ ಸರಳ ಭಾಷೆಯಲ್ಲಿ ವೈಜ್ಞಾನಿಕ ಹಾಗೂ ಪ್ರಾಯೋಗಿಕ ಮಾಹಿತಿಯ ವಿವರ ನೀಡಿದರು.40 ಕ್ಕೂ ಅಧಿಕ ರೈತರು ಈ ಕ್ಷೇತ್ರೋತ್ಸ ವದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು. ವಿಸ್ತರಣಾ ಮುಂದಾಳು ಡಾ. ಪಲ್ಲವಿ ಜಿ. ನಿರೂಪಿಸಿದರು.

> **ನವೀನ ತರಕಾರಿಗಳಿಗಿರುವ ಅವಕಾಶಗಳನ್ನು ಹಾಗೂ ಇಂತಹ ಪೋಷಕಾಂಶ ಸಮೃದ್ಧ ತರಕಾರಿಗಳು ಮಾನವನ ಆರೋಗ್ಯವನ್ನು ಕಾಪಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.**
> • **ಡಾ. ಜೆ. ಬಿ.ಗೋಪಾಲಿ**
> ವಿಸ್ತರಣಾ ನಿರ್ದೇಶಕ

MANAPPURAM FINANCE LTD.
CIN : L65910KL1992PLC006623
Registered Office : W - 4/ 638A, Manappuram House, P.O. Valapad, Thrissur - 680 567, Kerala, India

ಹರಾಜು ಪ್ರಕಟಣೆ

ಈ ಕೆಳಗಿನ ಖಾತೆಗಳಲ್ಲಿ ಅಡವಿಟ್ಟಿರುವ ಚಿನ್ನಾಭರಣಗಳ ಸಾರ್ವಜನಿಕ ಹರಾಜನ್ನು 16/02/2026 ರಂದು ಬೆಳಿಗ್ಗೆ 10.00 ಗಂಟೆಯಿಂದ ಈ ಕೆಳಗಿನ ಶಾಖೆಗಳಲ್ಲಿ ನಡೆಸಲು ಉದ್ದೇಶಿಸಲಾಗಿದೆ ಎಂದು ಈ ಮೂಲಕ ವಿಶೇಷವಾಗಿ ಸಾಲಗಾರರಿಗೆ ಮತ್ತು ಸಾರ್ವಜನಿಕರಿಗೆ ತಿಳಿಸಲಾಗಿದೆ. ನೋಂದಾಯಿತ ಪತ್ರಗಳ ಮೂಲಕ ತಿಳಿಸಲಾಗಿದ್ದರೂ ಸಾಲದ ಮೊತ್ತವನ್ನು ಪಾವತಿಸಲು ವಿಫಲರಾದ ಸುಸ್ತಿದಾರ ಗ್ರಾಹಕರ ಚಿನ್ನದ ಆಭರಣಗಳನ್ನು ಹರಾಜು ಮಾಡಲಾಗುತ್ತದೆ. ಹರಾಜಾಗದ ವಸ್ತುಗಳನ್ನು ಯಾವುದೇ ಸೂಚನೆ ಇಲ್ಲದೆ ಬೇರೆ ಯಾವುದೇ ದಿನಗಳಲ್ಲಿ ಹರಾಜು ಮಾಡಲಾಗುವುದು. ಹರಾಜಿನ ದಿನಾಂಕದಂದು ಚಿನ್ನದ ಮಾರುಕಟ್ಟೆ ಬೆಲೆ ಅಥವಾ ಸರಾಸರಿ 30 ದಿನಗಳ IBJA ದರದ 85%, ಯಾವುದು ಹೆಚ್ಚೋ ಅದರ ಆಧಾರದ ಮೇಲೆ ಮೀಸಲು ಬೆಲೆಯನ್ನು ನಿಗದಿಪಡಿಸಲಾಗುತ್ತದೆ. ಸ್ಥಳ ಅಥವಾ ದಿನಾಂಕದಲ್ಲಿನ ಬದಲಾವಣೆಯನ್ನು (ಯಾವುದಾದರೂ ಇದ್ದರೆ) ಹರಾಜು ಕೇಂದ್ರದಲ್ಲಿ ಮತ್ತು ಕಂಪನಿಯ ವೆಬ್‌ಸೈಟ್‌ನಲ್ಲಿ ಪ್ರದರ್ಶಿಸಲಾಗುತ್ತದೆ. ಕೆಳಗೆ ನೀಡಲಾದ ವಿವರಗಳು ಶಾಖೆಯ ಹೆಸರು, ಸಾಲದ ಸಂಖ್ಯೆ, ಗ್ರಾಹಕರ ಹೆಸರು, ಒಟ್ಟು ಬಾಕಿ ಮೊತ್ತ ('ನಲ್ಲಿ) ಐಟಂ ಹೆಸರಿನ ಕ್ರಮದಲ್ಲಿದೆ

ಅಡವುಗಳ ಪಟ್ಟಿ :

ಬಳ್ಳಾರಿ, ಬ್ರೂಸ್ ಪೇಟೆ ಬಳ್ಳಾರಿ, 0132470700029446, ನಜೀರ್ ಅಹ್ಮದ್, 17890/–, ಲಾಕೆಟ್ 1, ಸಿರುಗುಪ್ಪ, 0123440700047674, ಟಿ ಹುಸೇನಮ್ಮ, 19000/–, ಸ್ಟಡ್ 1, ಧಾರವಾಡ, ಹೊಸೂರು ರೋಡು ಹುಬ್ಬಳ್ಳಿ, 0115240730030895, ರೋಹಿತ್ ಮುತ್ತಣ್ಣವರ್, 53360/–, ಫಿಂಗರ್ ರಿಂಗ್ಸ್ 1, ಗದಗ , ಗದಗ , 0111780700046532, ಸನಾ ರಾನ್, 20000/–, ಫಿಂಗರ್ ರಿಂಗ್ಸ್ 1, ಮುಂಡರಗಿ, 0133930730035908, ಗುಮ್ಮಗೋಳ ಹನುಮತ್ತಪ್ಪ, 27058/–, ಉ–ಡ್ರಾಪ್ಸ್ 1, ಹಾವೇರಿ, ಗೌಳೀ ಗಲ್ಲೀ ರಾಣೇ ಬೆನ್ನೂರು, 0132560700060951, ಬಾಬು ಖಾನ್ ಭಾಷಾ ಸೌದಾಗರ, 8700/–, ಲಾಕೆಟ್ 1, 65580, ಗುರುಬಸಯ್ಯ ಮಹಾಂತಯ್ಯ ವಿರಕ್ತಮಠ, 14000/–, ಫಿಂಗರ್ ರಿಂಗ್ಸ್ 1, 70984, ಲಿಯಕುತಮೆಡ್ ಕಿಲ್ಲೆದಾರ್, 24000/–, ಫಿಂಗರ್ ರಿಂಗ್ಸ್ 1, ಹಲಿಗೇರಿ ಮೇನ್ ರೋಡು ರಾಣೇ ಬೆನ್ನೂರು, 0125260700062289, ರೋಖಯಾಬಿ ಉಡಗನಿ, 18500/–, ಡ್ರಾಪ್ಸ್ & ಸ್ಟಡ್ 1, 62300, ಮಾಬುಸಾಬ್ ಉಕ್ಕುಂದ, 18900/–, ಡ್ರಾಪ್ಸ್ & ಸ್ಟಡ್ 1, ರಾಣೇ ಬೆನ್ನೂರು, 0111400700080435, ಮಂಗಳ ಆಡಿನ್, 11000/–, ಡ್ರಾಪ್ಸ್ & ಸ್ಟಡ್ 1, 80459, ಫರ್ಜಾನ ಪಾಟೀಲ್ , 27000/–, ಫಿಂಗರ್ ರಿಂಗ್ಸ್ 1,ಇಯರ್ ರಿಂಗ್ಸ್ 1, ಶಿಗ್ಗಾಂವ, 0115810730034116, ಪ್ರಶಾಂತ ಪಿ ದ್ಯಾಮಕ್ಕನವರ್, 13840/–, ಇಯರ್ ರಿಂಗ್ಸ್ 1, ವಿದ್ಯಾ ನಗರ ಹಾವೇರಿ, 0120750730020911, ಅಕ್ರಂ ಯಲಿಗಾರ, 34729/–, ಇಯರ್ ರಿಂಗ್ಸ್ 1, ಕೊಪ್ಪಳ , ಕಾರಡಗಿ, 0136240700015717, ರಮೇಶಾ, 19499/–, ಡ್ರಾಪ್ಸ್ & ಸ್ಟಡ್ 1, 15828, ಅಮರನಾಥ ರಾಯಬರಿ, 34500/–, ಡ್ರಾಪ್ಸ್ & ಸ್ಟಡ್ 1, ಕೊಪ್ಪಳ ಮೇನ್ ರೋಡು, 0110470700085281, ಶಿವಾನಂದ, 10321/–, ಇಯರ್ ರಿಂಗ್ಸ್ 1, 85339, ಸೋಮಪ್ಪ, 70000/–, ಫಿಂಗರ್ ರಿಂಗ್ಸ್ 1,ಉ–ಡ್ರಾಪ್ಸ್ 1, ಎಲ್‌ಜಿ ರೋಡು ಗಂಗಾವತಿ, 0132430700046857, ಪ್ರಕಾಶ್, 8800/–, ಸ್ಟಡ್ 1,

ಆಸಕ್ತಿ ಹೊಂದಿದ ಬಿಡ್ಡರ್‌ಗಳು ಈ ಕೆಳಗಿನ ನಿಬಂಧನೆಗಳನ್ನು ಪಾಲಿಸಬೇಕು. ಬಿಡ್ಡರ್‌ಗಳು ಹರಾಜಿನ ದಿವಸ ರೂ. 10,000/ EMD -ಯನ್ನು ನಗದು ರೂಪದಲ್ಲಿ ಪಾವತಿಸಬೇಕು (ಯಶಸ್ವಿ ಹೊಂದದ ಬಿಡ್ಡರ್‌ಗಳಿಗೆ ಮರು ಪಾವತಿಸಲಾಗುವುದು), ಬಿಡ್ಡರ್‌ಗಳು ಅಧಿಕೃತ ಐಡಿಕಾರ್ಡ್/ಪಾನ್ ಕಾರ್ಡ್‌ನ್ನು ತರಬೇಕು ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು 9535907846(ದೂ. ಸಂ) ನ್ನು ಸಂಪರ್ಕಿಸಿ.

ಅಧಿಕೃತ ಅಧಿಕಾರಿ.
ಮಣಪ್ಪುರಂ ಫೈನಾನ್ಸ್ ಲಿ. ಪರವಾಗಿ